

## ವಿದ್ಯಾರ್ಥಿಗಳೇ, ಗಮನಿಸಿ

# ಏಕಾಗ್ರತೆ ಎಂದರೇನು?

ಏಕಾಗ್ರತೆ ಅಂದರೇನು? ಇದನ್ನು ಸ್ವಾಮಿ ವಿವೇಕಾನಂದರು ನಮಗೆ ಹೀಗೆ ಹೇಳಿಕೊಡುತ್ತಾರೆ: "ನೀವು ಯಾವುದೇ ಕೆಲಸವನ್ನು ಮಾಡುವಾಗಲೂ ನಿಮ್ಮ ಮನಸ್ಸು, ಹೃದಯ, ನಿಮ್ಮ ಸರ್ವಸ್ವವನ್ನೂ ಆ ಕೆಲಸಕ್ಕೆ ಕೊಡಿ. ನಾನೊಮ್ಮೆ ಒಬ್ಬ ಸಾಧು ಮಹಾತ್ಮನನ್ನು ನೋಡಿದ್ದೆ. ಆತ ಪೂಜೆ ಧ್ಯಾನಗಳನ್ನು ಎಷ್ಟು ಏಕಾಗ್ರತೆ ಶ್ರದ್ಧೆಗಳಿಂದ ಮಾಡುತ್ತಿದ್ದನೋ, ಅಷ್ಟೇ ಸಾವಧಾನದಿಂದ ತನಗೆ ಸೇರಿದ ಅಡುಗೆ ಮಾಡುವ ಹಿತ್ತಾಳೆ ಪಾತ್ರೆಗಳನ್ನೂ ಫಳ ಫಳನೆ ಹೊಳೆಯುವ ಚಿನ್ನದಂತೆ ತೊಳೆದಿಡುತ್ತಿದ್ದನು."

ಹೆಚ್ಚು ಏಕಾಗ್ರತೆ ಇದ್ದಷ್ಟೂ ಹೆಚ್ಚು ಜ್ಞಾನವನ್ನು ಗಳಿಸಬಹುದು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಅವರ ಪ್ರಕಾರ ಇದೊಂದೇ ಜ್ಞಾನಾರ್ಜನೆಗೆ ಇರುವ ಮಾರ್ಗ. ಇದಕ್ಕೆ ಉದಾಹರಣೆಗಳು ಅವರದೇ ಜೀವನದಲ್ಲಿ ಸಿಕ್ಕುತ್ತವೆ. ಅವುಗಳನ್ನು ಈಗ ನೋಡೋಣ:

ಸ್ವಾಮೀಜಿ ಮೀರತ್ ಎಂಬ ಊರಿನಲ್ಲಿ ನೆಲೆಸಿದ್ದರು. ಅಲ್ಲಿನ ಸಾರ್ವಜನಿಕ ಗ್ರಂಥಾಲಯದಿಂದ ಸರ್ ಜಾನ್ ಲಬೆಕ್ ಎಂಬುವವನು ಬರೆದ ಪುಸ್ತಕಗಳನ್ನು ತರಿಸಿಕೊಂಡರು. ಅವರ ಸೋದರ ಸಂನ್ಯಾಸಿಗಳಾದ ಸ್ವಾಮಿ ಅಖಂಡಾನಂದರು ಅವುಗಳನ್ನು ಗ್ರಂಥಾಲಯದಿಂದ ಅವರಿಗೆ ತಂದುಕೊಟ್ಟರು. ಸ್ವಾಮೀಜಿ ಅವುಗಳನ್ನು ಒಂದೇ ದಿನದಲ್ಲಿ ಓದಿ ಮುಗಿಸಿಬಿಟ್ಟರು! ಅಖಂಡಾನಂದರಿಗೆ ಅವನ್ನು ವಾಪಸ್ಸು ಕೊಡುವಂತೆ ಹೇಳಿದರು. ಅಷ್ಟು ಬೇಗ ಪುಸ್ತಕಗಳನ್ನು ಹಿಂತಿರುಗಿ ತಂದುಕೊಟ್ಟಿದ್ದನ್ನು ನೋಡಿ ಗ್ರಂಥಪಾಲಕ ಆಶ್ಚರ್ಯಗೊಂಡ. "ನೀವು ಯಾರಿಗಾಗಿ ಪುಸ್ತಕಗಳನ್ನು ತೆಗೆದುಕೊಂಡು ಹೋದಿರೋ, ಅವರು ಇಷ್ಟು ಬೇಗ ಇವುಗಳನ್ನೆಲ್ಲ ಓದಿಮುಗಿಸಿಬಿಟ್ಟರೇ?" ಎಂದು ಅಚ್ಚರಿಯಿಂದ ಕೇಳಿದ. ಅಖಂಡಾನಂದರು ವಿವೇಕಾನಂದರಿಗೆ ಈ ವಿಷಯವನ್ನು ತಿಳಿಸಿದರು. ಈಗ ಸ್ವಾಮೀಜಿಯೇ ಗ್ರಂಥಾಲಯಕ್ಕೆ ಹೋದರು. ಗ್ರಂಥಪಾಲಕನನ್ನು ಭೇಟಿ ಮಾಡಿದರು. ತಾವು ಎಲ್ಲ ಪುಸ್ತಕಗಳನ್ನೂ ಓದಿ ಮುಗಿಸಿರುವುದಾಗಿ ಹೇಳಿದರು. ಅಷ್ಟೇ ಅಲ್ಲ, ಆ ಪುಸ್ತಕಗಳಲ್ಲಿ ಯಾವ ವಿಷಯವನ್ನಾದರೂ ಕೇಳಬಹುದೆಂದೂ ಸವಾಲೆಸೆದರು. ಗ್ರಂಥಪಾಲಕ ಅವರಿಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳಿದ. ಸ್ವಾಮಿ ವಿವೇಕಾನಂದರು ಸರಿಯಾದ ಉತ್ತರಗಳನ್ನು ಹೇಳಿದ್ದಷ್ಟೇ ಅಲ್ಲ, ಆ ಪುಸ್ತಕಗಳಿಂದ ವಾಕ್ಯವಾಕ್ಯಗಳನ್ನೇ ಉದ್ಧರಿಸುತ್ತಿದ್ದರು. ಗ್ರಂಥಪಾಲಕ ತುಂಬ ಅಚ್ಚರಿಯಿಂದ, "ಇದು ಹೇಗೆ ಸಾಧ್ಯ?" ಎಂದು ಕೇಳಿದ. ಅದಕ್ಕೆ ಸ್ವಾಮೀಜಿ, ತಾವು ಸಾಧಾರಣ ಮನುಷ್ಯರಂತೆ ಓದುವುದಿಲ್ಲ; ಕೆಲವು ವಾಕ್ಯಗಳನ್ನು ಓದಿಬಿಟ್ಟರೆ ಸಾಕು, ಲೇಖಕ ಏನು ಹೇಳಲು ಹೊರಟಿದ್ದಾನೆಯೋ, ಅದೆಲ್ಲವೂ ಮನಸ್ಸಿನಲ್ಲಿ ಹೊಳೆದುಬಿಡುತ್ತದೆ ಎಂದು ನುಡಿದರು. ಇದು ಏನನ್ನು ತೋರಿಸುತ್ತದೆ? ಸ್ವಾಮೀಜಿಯೇ ಹೇಳುತ್ತಾರೆ: **"ಮಾನಸಿಕ ಶಕ್ತಿಗೆ ಮಿತಿಯೆಂಬುದೇ ಇಲ್ಲ. ಅದು ಯಾವುದೇ ವಿಷಯದ ಮೇಲೆ ಏಕಾಗ್ರವಾದಷ್ಟೂ ಹೆಚ್ಚು ಶಕ್ತಿ ಕೇಂದ್ರೀಕೃತವಾಗುವುದು. ಇದೇ ರಹಸ್ಯ."**

ಇನ್ನೊಂದು ಘಟನೆಯನ್ನು ನೋಡೋಣ. ಸ್ವಾಮೀಜಿ ಅಮೆರಿಕದಲ್ಲಿ ಡಾಯ್ಸನ್ ಎನ್ನುವವರ ಮನೆಯಲ್ಲಿ ಉಳಿದುಕೊಂಡಿದ್ದರು. ಅಲ್ಲಿ ಒಂದು ಕವನಸಂಗ್ರಹದ ಪುಸ್ತಕವನ್ನು ಓದುತ್ತಿದ್ದರು. ಅದೇ ಸಮಯದಲ್ಲಿ ಡಾಯ್ಸನ್ ಬಂದು ಅವರನ್ನು ಮಾತನಾಡಿಸಿದರು. ಸ್ವಾಮೀಜಿ ಅದಕ್ಕೆ ಉತ್ತರ ಕೊಡಲೇ ಇಲ್ಲ. ಮತ್ತೆ ಮತ್ತೆ ಮಾತನಾಡಿಸಿದ ನಂತರವಷ್ಟೇ, ಅವರ ಗಮನ ಡಾಯ್ಸನ್ನರ ಕಡೆಗೆ ಹರಿಯಿತು. ಅದಲ್ಲದೆ ಸ್ವಾಮೀಜಿ ತಮ್ಮ ಮಾತುಕತೆಯಲ್ಲಿ, ಆಗತಾನೇ ಓದುತ್ತಿದ್ದ ಪುಸ್ತಕದಲ್ಲಿ ಇದ್ದಹಾಗೆಯೇ ಹೇಳಲು ಆರಂಭಿಸಿದರು. "ಇದು ಹೇಗೆ ಸಾಧ್ಯ?" ಎಂದು ಡಾಯ್ಸನ್ ಪ್ರಶ್ನಿಸಿದಾಗ ಸ್ವಾಮೀಜಿ ಹೇಳುತ್ತಾರೆ : "ನಾನು ಓದುವಾಗ ಕೆಂಡವನ್ನು ನನ್ನ ಮೇಲೆ ಇಟ್ಟರೂ ಗೊತ್ತಾಗುವುದಿಲ್ಲ. ಹೀಗೆ ತನ್ಮಯತೆಯಿಂದ ಓದುವುದರಿಂದಲೇ ವಿಷಯಗಳನ್ನೆಲ್ಲ ಅಷ್ಟು ಬೇಗ ಗ್ರಹಿಸಲು ಸಾಧ್ಯ."

ತಮ್ಮ ಈ ಅನುಭವವನ್ನೇ ಸ್ವಾಮೀಜಿ ಈ ಮಾತುಗಳಲ್ಲಿ ಹೇಳುತ್ತಾರೆ: "ದೇವದೂತರು, ಮಹರ್ಷಿಗಳು ಮತ್ತು ತಪಸ್ವಿಗಳು ಏನು ಮಾಡಿದರು? ಒಂದೇ ಜೀವನದಲ್ಲಿ ಇಡೀ ಮಾನವ ಜನಾಂಗದ ಬಾಳನ್ನು ಬಾಳಿದರು. ಸಾಧಾರಣ ಮಾನವನು ಮುಕ್ತಿಯನ್ನು ಪಡೆಯುವುದಕ್ಕೆ ಹಲವು ಜನ್ಮಗಳಲ್ಲಿ ನಡೆಯಬೇಕಾದ ದಾರಿಯನ್ನು ಒಂದೇ ಜನ್ಮದಲ್ಲಿ ಮುಗಿಸಿದರು. ಒಂದೇ ಜನ್ಮದಲ್ಲಿಯೇ ಅವರು ಪೂರ್ಣತೆಯನ್ನು ಪಡೆದರು. ಮತ್ತಾವುದನ್ನೂ ಅವರು ಆಲೋಚಿಸುತ್ತಿರಲಿಲ್ಲ. ಬೇರಾವ ವಿಷಯಗಳನ್ನೂ ಅವರು ಒಂದು ಗಳಿಗೆಯೂ ಯೋಚಿಸುತ್ತಲೇ ಇರಲಿಲ್ಲ. **ಏಕಾಗ್ರತೆಯೆಂದರೆ ಇದೇ : ಕಾಲವನ್ನು ಕಡಮೆ ಮಾಡಿಕೊಳ್ಳುವುದಕ್ಕಾಗಿ, ಗಹನವಾದ ವಿಷಯಗಳನ್ನು ರಕ್ತಗತಮಾಡಿಕೊಳ್ಳುವ ಶಕ್ತಿಯನ್ನು ತೀವ್ರಗೊಳಿಸಿಕೊಳ್ಳುವುದು."**

ಸ್ವಾಮೀಜಿ ಬೇಲೂರು ಮಠದಲ್ಲಿ ಇದ್ದಾಗ ನಡೆದ ಒಂದು ಘಟನೆ ಕೂಡ ಸ್ವಾರಸ್ಯವಾಗಿದೆ. ಬ್ರಿಟಾನಿಕಾ ವಿಶ್ವಕೋಶದ ಸಂಪುಟಗಳನ್ನು ಹೊಸದಾಗಿ ಮಠಕ್ಕೆ ತರಿಸಿದ್ದರು. ಹೊಳೆಹೊಳೆಯುತ್ತಿದ್ದ ಆ ಪುಸ್ತಕಗಳನ್ನು ನೋಡಿದ ಅವರ ಒಬ್ಬ ಶಿಷ್ಯ ಹೀಗೆ ಉದ್ಗರಿಸಿದ: "ಇಡೀ ಜೀವನವೆಲ್ಲ ಓದಿದರೂ ಈ ಸಂಪುಟಗಳನ್ನು ಓದಿ ಮುಗಿಸಲು ಆಗುವುದಿಲ್ಲ." ಪಾಪ, ಅವನಿಗೆ ಗೊತ್ತಿರಲಿಲ್ಲ. ಸ್ವಾಮೀಜಿ ಆಗಲೇ ಆ ವಿಶ್ವಕೋಶದ ಹತ್ತು ಸಂಪುಟಗಳನ್ನು ಓದಿ ಮುಗಿಸಿದ್ದರು. ಹನ್ನೊಂದನೆಯ ಸಂಪುಟವನ್ನು ಓದಲು ಆರಂಭಿಸಿದ್ದರು. ಸ್ವಾಮೀಜಿ ಆ ಶಿಷ್ಯನಿಗೆ ಗದರಿಸಿದರು: "ಏನು ಹೇಳುತ್ತಿದ್ದೀಯಾ? ಈ ಹತ್ತು ಸಂಪುಟಗಳಲ್ಲಿ ಇರುವ ಯಾವ ವಿಷಯವನ್ನಾದರೂ ಕೇಳು. ಅದಕ್ಕೆಲ್ಲಾ ಉತ್ತರ ಹೇಳುತ್ತೇನೆ." ಶಿಷ್ಯ ಕಕ್ಕಾಬಿಕ್ಕಿಯಾದ. "ನೀವು ಈ ಪುಸ್ತಕಗಳನ್ನೆಲ್ಲ ಓದಿದ್ದೀರಾ?" ಎಂದು ಕೇಳಿದ. ಸ್ವಾಮೀಜಿ ಹೇಳಿದರು, "ಓದದೆ ಇದ್ದರೆ ಪ್ರಶ್ನೆ ಕೇಳೆಂದು ನಿನಗೇಕೆ ಹೇಳುತ್ತಿದ್ದೆ?" ಶಿಷ್ಯ ಪ್ರಶ್ನೆಗಳನ್ನು ಕೇಳಿದಾಗ, ಸ್ವಾಮೀಜಿ ಅತ್ಯಂತ ಕಷ್ಟವಾದ ಭಾಗಗಳನ್ನೂ ಪುಸ್ತಕಗಳಲ್ಲಿ ಇದ್ದಂತೆಯೇ ಹೇಳಿಬಿಟ್ಟರು. ಅವಾಕ್ಕಾದ ಶಿಷ್ಯ ಹೇಳಿದ, "ಇದು ಮನುಷ್ಯಶಕ್ತಿಯಂತೂ ಖಂಡಿತ ಅಲ್ಲ." ಅದಕ್ಕೆ ಸ್ವಾಮೀಜಿ ಹೇಳುತ್ತಾರೆ: "ನೋಡಿದೆಯಾ, ಕಟ್ಟುನಿಟ್ಟಾದ ಬ್ರಹ್ಮಚರ್ಯದ ಅಭ್ಯಾಸದಿಂದ ಎಲ್ಲ ವಿದ್ಯೆಯನ್ನೂ ಬಹಳ ಸ್ವಲ್ಪ ಕಾಲದಲ್ಲಿಯೇ ಕಲಿತುಬಿಡಬಹುದು. ಅದರಿಂದ ಒಮ್ಮೆ ಓದಿದ್ದನ್ನು ಅಥವಾ ಒಮ್ಮೆ ಕೇಳಿದ್ದನ್ನು ಮರೆಯದೆ ಇರುವಂಥ ಜ್ಞಾಪಕಶಕ್ತಿ ಬರುತ್ತದೆ."

ಬ್ರಹ್ಮಚರ್ಯದ ಶಕ್ತಿಯನ್ನು ಕುರಿತು ಅವರು ಇನ್ನೊಂದೆಡೆ ಹೀಗೆ ಹೇಳುತ್ತಾರೆ: "ಯಾವ ಶಕ್ತಿಯನ್ನೂ ಹೊಸದಾಗಿ ಉತ್ಪನ್ನ ಮಾಡುವುದಕ್ಕೆ ಆಗುವುದಿಲ್ಲ. ಇರುವ ಶಕ್ತಿಯನ್ನು ಬೇರೆ ಕಡೆಗೆ ತಿರುಗಿಸಬಹುದು, ಅಷ್ಟೇ. ಆದಕಾರಣ ನಮ್ಮಲ್ಲಿರುವ ಅದ್ಭುತಶಕ್ತಿಯನ್ನು ನಿಗ್ರಹಿಸುವುದನ್ನು ಕಲಿತುಕೊಳ್ಳಬೇಕು. ನಮ್ಮ ಇಚ್ಛಾಶಕ್ತಿಯ ಮೂಲಕ ಅದು ವ್ಯರ್ಥವಾಗದಂತೆ ನೋಡಿಕೊಳ್ಳಬೇಕು."

**(ಮುಂದಿನ ತಿಂಗಳು : ಏಕಾಗ್ರತೆಗೆ ಉಪಾಯಗಳು – ಅಭ್ಯಾಸ)**

# ಶ್ರೀರಾಮನಾಮ ಸಂಕೀರ್ತನೆಯ ರೋಚಕ ಇತಿಹಾಸ



ಸ್ವಾಮಿ ವಿದೇಹಾತ್ಮಾನಂದ

*(ಹಿಂದಿನ ಸಂಚಿಕೆಯಿಂದ)*

## ರಾಮನಾಮ ಸಂಕೀರ್ತನೆಯ ರಚನಕಾರರು

ಸುಶ್ರಾವ್ಯವಾದ 'ರಾಮನಾಮ ಸಂಕೀರ್ತನೆ' ಅಥವಾ 'ನಾಮ–ರಾಮಾಯಣ'ವನ್ನು ಯಾರು, ಯಾವಾಗ ರಚಿಸಿದರು? ಇದನ್ನು ತಿಳಿದುಕೊಳ್ಳುವ ಬಯಕೆ ಜನಗಳ ಮನಸ್ಸಿನಲ್ಲಿ ಬಹಳ ಕಾಲದಿಂದಲೂ ಇದೆ. ಈಗಾಗಲೇ ಕೆಲವರು ಈ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಆದರೆ ಇನ್ನೂ ಯಾವುದೇ ಖಚಿತವಾದ ಸೂಚನೆ ದೊರಕಿಲ್ಲ ಎಂದೇ ಹೇಳಬೇಕು.

ನಾಗಪುರದಿಂದ 'ಲೋಕಮತ' ಎಂಬ ಮರಾಠಿ ಪತ್ರಿಕೆ ಪ್ರಕಟವಾಗುತ್ತದೆ. ಇದರ ೧೯೮೬ನೇ ಇಸವಿಯ ಅಕ್ಟೋಬರ್ ಅಥವಾ ನವೆಂಬರ್ ಸಂಚಿಕೆಯಲ್ಲಿ ಶ್ರೀ ವಾ. ಲ. ಮಂಜುಲ್ ಅವರ ಚಿಕ್ಕ ಲೇಖನವೊಂದು ಪ್ರಕಟವಾಯಿತು. ಈ ಲೇಖನದ ಹೆಸರು 'ಹಳೆಯ ಹಸ್ತಪ್ರತಿಗಳ ಮೂಲಕ ಹೊಸ ಸಂಶೋಧನೆ' ಎಂದು. ಇದರ ಲೇಖಕರು ಪುಣೆಯ ಭಂಡಾರಕರ್ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯ ಒಬ್ಬ ಅಧಿಕಾರಿಯಾಗಿದ್ದಾರೆ. ಈ ಪ್ರಬಂಧದಲ್ಲಿ ಅವರು ಹೀಗೆ ಬರೆದಿದ್ದಾರೆ: "ಕರಾಡಿನ ಕೀರ್ತನಕಾರರಾದ ಶ್ರೀ ದ. ರಾ. ಜೋಷಿಯವರು ಸಂಗ್ರಹಿಸಿದ ಕೈಬರಹಗಳು ಭಂಡಾರಕರ್ ಸಂಸ್ಥೆಗೆ ದೊರಕಿವೆ. ಅದರಲ್ಲಿ ಒಂದು ಕೈಬರಹವು ಕರಾಡಿನವರಾದ, ೧೯ನೇ ಶತಮಾನದ ಪ್ರಸಿದ್ಧ ಸಂಸ್ಕೃತ ವಿದ್ವಾಂಸರೂ, ರಾಮಭಕ್ತ ಕವಿಕಾರರೂ ಹಾಗೂ ಕೀರ್ತನಕಾರರೂ ಆದ ವಿಠೋಬಾ ಅಣ್ಣಾ ದಫ್ತರದಾರ್ ಅವರದಾಗಿದೆ. ಈ ಕೈಬರಹದಲ್ಲಿ 'ನಾಮ–ರಾಮಾಯಣ'ವು ಸಂಸ್ಕೃತ ಕಾವ್ಯರೂಪದಲ್ಲಿ ಕಾಣಸಿಗುತ್ತದೆ. ವಿಠೋಬಾ ಅಣ್ಣಾ ದಫ್ತರದಾರ್ ಇದರಲ್ಲಿ, ಶ್ರೀರಾಮನ ಒಂದೊಂದೇ ಗುಣವನ್ನು ವರ್ಣಿಸುತ್ತಾರೆ; ಹಾಗೆಯೇ ರಾಮಚರಿತ್ರೆಯ ಒಂದೊಂದೇ ಘಟನೆಯನ್ನು ಪ್ರಸ್ತುತಪಡಿಸಿದ್ದಾರೆ. ಈ ಪ್ರಕಾರ, ಬಾಲಕಾಂಡದಿಂದ ಹಿಡಿದು ಉತ್ತರಕಾಂಡದವರೆಗೆ ಸಂಪೂರ್ಣ ರಾಮಾಯಣವನ್ನು ರಾಮನಾಮದೊಂದಿಗೆ ಪೋಣಿಸಿದ್ದಾರೆ. ಹೀಗೆ ಈ ರಚನೆಗೆ 'ನಾಮ–ರಾಮಾಯಣ' ಎನ್ನುವ ಹೆಸರು ಅನ್ವರ್ಥವಾಗಿದೆ. ಈ 'ನಾಮ–ರಾಮಾಯಣ'ದ ಪ್ರತಿಯು ಶ್ರೀ ವಿಠೋಬಾ ಅಣ್ಣಾ ದಫ್ತರದಾರ್ ಅವರ ಸುಪುತ್ರರಾದ ರಘುವೀರರು ೧೮೬೫ ನೇ ಇಸವಿಯಲ್ಲಿ ನಕಲು ಮಾಡಿದ್ದಾಗಿದೆ. ೫೦–೬೦ ವರ್ಷಗಳ ಹಿಂದೆ ರಾಮಕೃಷ್ಣ ಮಠದ ಒಬ್ಬ ಸಾಧುಗಳೊಬ್ಬರಿಗೆ, ತಮ್ಮ ದಕ್ಷಿಣಭಾರತ ಪ್ರವಾಸ ಸಂದರ್ಭದಲ್ಲಿ, ಈ ಕಾವ್ಯವನ್ನು ಶ್ರವಣ ಮಾಡುವ ಸೌಭಾಗ್ಯ ಒದಗಿಬಂದಿತ್ತು. ಅದರಿಂದ ಅವರು ಬಹಳ ಉತ್ತೇಜಿತರಾದರು. ಕೇವಲ ಭಾರತವೇ ಅಲ್ಲದೆ, ಪ್ರಪಂಚದ ಎಲ್ಲ ರಾಮಕೃಷ್ಣ ಮಠಗಳಲ್ಲಿಯೂ, ನಿತ್ಯೋಪಾಸನೆಯಾಗಿ ಹಾಡಲ್ಪಡುವ ಸೌಭಾಗ್ಯ ಈ ಕಾವ್ಯಕ್ಕೆ ಒದಗಿಬಂದಿತು. ಈ ಹಾಡನ್ನು ಹಾಡುವ ಭಕ್ತರಿಗೆ ಇದರ ರಚನಕಾರರ ಬಗ್ಗೆ ಅರಿವಿಲ್ಲದಿರಬಹುದು. ಆದರೆ ಈಗ 'ನಾಮ–ರಾಮಾಯಣ' ಕಾವ್ಯವು ಇಡೀ ಜಗತ್ತಿನಲ್ಲಿಯೇ ಹರಡಿದೆ ಎಂದರೆ ಅತಿಶಯೋಕ್ತಿಯಾಗಲಾರದು."

ಈ ಲೇಖನವನ್ನು ಓದಿದ ನಂತರ ಪ್ರಸ್ತುತ ಲೇಖಕರು (ಸ್ವಾಮಿ ವಿದೇಹಾತ್ಮಾನಂದಜಿ) 'ನಾಮ–ರಾಮಾಯಣ' ಕಾವ್ಯದ ಬಗ್ಗೆ ಸಂಶೋಧನೆಯನ್ನು ಆರಂಭಿಸಿದರು. ಪುಣೆಯ ರಾಮಕೃಷ್ಣ ಮಠದ ಸ್ವಾಮಿ ರಾಮೇಶ್ವರಾನಂದರಿಂದ ಈ ಕಾರ್ಯಕ್ಕೆ ಹೆಚ್ಚಿನ ಸಹಕಾರ ದೊರೆಯಿತು. ಅವರು ಬೆಳಗಾವಿಯಿಂದ ಪ್ರಕಟವಾಗಿರುವ ವಿಠೋಬಾ ಅಣ್ಣಾ ದಫ್ತರದಾರ್ ಅವರ ಕೃತಿಗಳಾದ 'ಪದಸಂಗ್ರಹ' ಮತ್ತು 'ಪದಸಮೂಹ'ಗಳಿಂದ ಕೆಲವು ಪುಟಗಳನ್ನು ಪ್ರತಿಮಾಡಿಸಿ ಕಳುಹಿಸಿಕೊಟ್ಟಿದ್ದಾರೆ. ಅವುಗಳಲ್ಲಿ ವಿಠೋಬಾ ಅವರ ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ನಾಮ–ರಾಮಾಯಣದ ಮುದ್ರಿತ ಪ್ರತಿಗಳು ದೊರೆತಿವೆ. ಶ್ರೀ ಪ್ರಫುಲ್ಲ ತುಂಗಾರೆಯವರ ಸಹಾಯದಿಂದ ಈ ಪ್ರತಿಗಳನ್ನು ಪಡೆಯಲಾಗಿದೆ. ಇದರ ಜೊತೆಗೆ ವಿಠೋಬಾರವರ ಜೀವನಚರಿತ್ರೆಗೆ ಸಂಬಂಧಪಟ್ಟ ವಿಷಯಗಳನ್ನು ಇನ್ನಿತರ ಕಡೆಗಳಿಂದಲೂ ಸಂಗ್ರಹಿಸಲಾಗಿದೆ.

## ವಿಠೋಬಾ ಅಣ್ಣಾ ದಫ್ತರದಾರ್ (೧೮೧೩ – ೧೮೭೩)

ವಿಠೋಬಾ ಅಣ್ಣಾ ಅಥವಾ ವಿಠಲ ಪಂತ್ ಅವರು ಮಹಾರಾಷ್ಟ್ರ ಪ್ರಾಂತ್ಯಕ್ಕೆ ಸೇರಿದ ಕವಿಗಳು. ಇವರು ೧೮೧೩ರಲ್ಲಿ, ಕರಾಡಿನ ಶಾಂಡಿಲ್ಯ ಗೋತ್ರದ ಬೇದರೆ ಎಂಬ ಉಪನಾಮದ